**CC No.492/2007**
**CW.01**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಸಿಸಿ ನಂ 492/2007**

**ಸಿ.ಡಬ್ಲೂಃ 01**

| | |
|---|---|
| ಸಾಕ್ಷಿದಾರರ ಹೆಸರು | ಕೆ.ಜಿ. ಅನಿತಾ |
| ಗಂಡನ ಹೆಸರು | ಕೆ. ರವಿಕಿರಣ್ |
| ವಯಸ್ಸು | 52 ವರ್ಷ |
| ಉದ್ಯೋಗ | ಪಿ.ಎಸ್.ಐ |
| ವಾಸ ಸ್ಥಳ | ಬೆಂಗಳೂರು |

**ದಿನಾಂಕಃ 20.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಅಭಿಯೋಜಕ ರವರಿಂದ**

ದಿಃ14.07.2023 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಡಿ.ಬಿ.ಪುರ ತಾಲ್ಲೂಕು, ಕಸಬಾ ಹೋಬಳಿ, ಕರೇನಹಳ್ಳಿ ಮಂಗಳ ಶಾಲೆಯ ಬಳಿ ಪಂಚಾಯಿತಿದಾರರುಗಳ ಸಮಕ್ಷಮದಲ್ಲಿ ಹೇಳಿ ಬರೆಯಿಸಿದ ಆರೋಪಿ ಹಾಜರಾತಿ ಅಗತ್ಯಪಡಿಸುವ ಉದ್ಘೋಷಣಾ ಪಂಚನಾಮೆ.

ಅದೇ ದಿನ ದೊಡ್ಡಬಳ್ಳಾಪುರ ಟೌನ್ ಪೋಲೀಸ್ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯನಿರ್ಹಿಸುತ್ತಿದ್ದು, ದೊಡ್ಡಬಳ್ಳಾಪುರ ಪೋಲೀಸ್ ಠಾಣಾ ಮೊಕದ್ದಮೆ ಸಂಖ್ಯೆ 71/2007 ಕಲಂ 504, 506 ಐ.ಪಿ.ಸಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಸಿಸಿ ನಂ. 492/2007 ರಲ್ಲಿನ ಆರೋಪಿ ಬಾಲಾಜಿ ಬಿನ್ ರಾಮಕೃಷ್ಣಪ್ಪ, 50 ವರ್ಷ, ಕರೇನಹಳ್ಳಿ ಮಂಗಳ ಶಾಲೆಯ ಬಳಿ, ದೊಡ್ಡಬಳ್ಳಾಪುರ ಜಿಲ್ಲೆ ಅವರ ಹಾಜರಾತಿಯನ್ನು ಅಗತ್ಯಪಡಿಸಿಸು ಉದ್ಘೋಷಣೆಯನ್ನು ಹೊರಡಿಸಲು ಬಂದಿದ್ದು ಪಂಚಾಯಿತಿದಾರರುಗಳನ್ನು ಬರಮಾಡಿಕೊಂಡು ಮೇಲ್ಕಂಡ ಆರೋಪಿಯ ಹಾಜರಾತಿಯನ್ನು ಅಗತ್ಯಪಡಿಸುವ ಉದ್ಘೋಷಣೆಯನ್ನು ಹೊರಡಿಸಬೇಕಾಗಿದ್ದು, ಪಂಚರುಗಳನ್ನು ಕರೆಸಿದ್ದರ ಮೇರೆಗೆ ಅವರುಗಳು ಒಪ್ಪಿ ಮೇಲ್ಕಂಡ ಶಾಲೆಯ ಬಳಿ ಆರೋಪಿಯ ಮನೆಯ ಮುಂಭಾಗದಲ್ಲಿ ಬಂದಿದ್ದು, ನಂತರ ಅವರುಗಳ ಸಮಕ್ಷಮ ಆರೋಪಿ ನೀಡಿರುವ ಕರೇನಹಳ್ಳಿ ಮಂಗಳ ಶಾಲೆಯ ಬಳಿ ಬಾಲಾಜಿ ಬಿನ್ ರಾಮಕೃಷ್ಣಪ್ಪರವರು ಈ ಹಿಂದೆ ವಾಸ ಮಾಡುತ್ತಿದ್ದ ಅಕ್ಕಪಕ್ಕದಲ್ಲಿ ಹಾಗೂ ಇತರೆ ಕಡೆಗಳಲ್ಲಿ ಹುಡುಕಾಡಿದರೂ ಸಹ ಆರೋಪಿಯ ಬಗ್ಗೆ ಮಾಹಿತಿ ತಿಳಿದಿರುವುದಿಲ್ಲ. ಆತನು ವಿಳಾಸದಲ್ಲಿರದೇ ತಲೆ ಮರೆಸಿಕೊಂಡಿರುತ್ತಾರೆ ಎಂದು ಅಕ್ಕಪಕ್ಕದವರು ನುಡಿದಿರುತ್ತಾರೆ. ಆತನ ಬಗ್ಗೆ ಯಾವುದೇ ಮಾಹಿತಿ ದೊರೆತಿರುವುದಿಲ್ಲ. ಆದ್ದರಿಂದ ಮಂಗಳ ಶಾಲೆಯ ಬಳಿ ಹಾಗೂ ಇತರೆ ಕಡೆಗಳಿಗೆ ಪ್ರೊಕ್ಲೋಮೇಷನ್ ಜೆರಾಕ್ಸ್ ಪ್ರತಿಗಳನ್ನು ಅಂಟಿಸಿರುತ್ತೇವೆ. ಪ್ರಮುಖ

ಬೀದಿಗಳಲ್ಲಿ ಡಂಗೂರ ಹೊಡೆಸಿ, ಟಾಂ ಟಾಂ ಹೊಡೆಸಿರುತ್ತೇವೆ. ನಾಳೆಯ ದಿನ ಆರೋಪಿಯ ಬಗ್ಗೆ ವಿಚಾರ ತಿಳಿದು ಬಂದಲ್ಲಿ ಮಾನ್ಯ 2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಹಾಜರಾಗುವಂತೆ ಪ್ರಕಟಣೆ ಹೊರಡಿಸಿರುತ್ತೇವೆ.

ಸದರಿ ಸ್ಥಳಕ್ಕೆ ಚೆಕ್ಕುಂಬಂಧಿ ಪೂರ್ವ ಹಾಗೂ ಪಶ್ಚಿಮಕ್ಕೆ ಕರೇನಹಳ್ಳಿ 11 ನೇ ಕ್ರಾಸ್‌ಗೆ ಹೋಗುವ ಸಿ ಮೆಂಟ್ ರಸ್ತೆ, ಉತ್ತರಕ್ಕೆ ಶ್ರೀಮತಿ ಹೆಚ್.ಎನ್ ಕವಿತಾರವರ ಖಾಲಿ ಸೈಟ್, ದಕ್ಷಿಣಕ್ಕೆ ಶ್ರೀ ಮಂಗಳ ವಿದ್ಯಾ ಮಂದಿರ ಇರುತ್ತದೆ ಎಂದು ಪಂಚಾಯಿತಿದಾರರುಗಳು ನಮ್ಮೆಲ್ಲರ ಸಮಕ್ಷಮ ಆರೋಪಿ ಬಾಲಾಜಿ ಬಿನ್ ರಾಮಕೃಷ್ಣಪ್ಪ, 40 ವರ್ಷ, ಈತನ ಹಾಜರಾತಿಯನ್ನು ಅಗತ್ಯಪಡಿಸುವ ಸಲುವಾಗಿ ಹೊರಡಿಸಿರುವ ಉದ್ಘೋಷಣಾ ಪಂಚನಾಮೆ. ಈ ಪಂಚನಾಮೆಯನ್ನು ದಿಃ 14.07.2023 ರಂದು ಮಧ್ಯಾಹ್ನ 3-00 ರಿಂದ 3-30 ಗಂಟೆಯವರೆಗೂ ಬರೆಸಿರುತ್ತದೆ.

ಆರೋಪಿ ಹಾಜರಾತಿ ಪಂಚನಾಮೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿಸಿ-1 ಹಾಗೂ ಸಹಿಯನ್ನು ನಿಸಿ-1(ಎ) ಎಂದು ಗುರುತಿಸಲಾಯಿತು. 4 ಛಾಯಾಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಸಿ-2 ರಿಂದ 5 ಎಂದು ಗುರುತಿಸಲಾಯಿತು. ನ್ಯಾಯಾಲಯಕ್ಕೆ ಸಲ್ಲಿಸಿದ ನಿವೇದನಾ ಪತ್ರದಲ್ಲಿನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ನಿವೇದನಾ ಪತ್ರವನ್ನು ನಿಸಿ-6 ಮತ್ತು ಸಹಿಯನ್ನು 6(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ ಇಲ್ಲ.**
**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**